ಆ) ಸದರಿ ಕಟ್ಟಡವನ್ನು ಯಾವಾಗ ನಿರ್ಮಿಸಲಾಗಿತ್ತು, ಹಾಗೂ ಅಲ್ಲಿ ನಡೆಯುತ್ತಿರುವ ತರಗತಿಗಳೆಷ್ಟು (ಕಿರಿಯ ಕಾಲೇಜು ಹಾಗೂ ಪ್ರೌಢ ಶಾಲೆಗೆ ಸಂಬಂಧಿಸಿದಂತೆ ವಿವರಗಳನ್ನು ಒದಗಿಸುವುದು)?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು) .—

ಅ) ಪ್ರೌಢ ಶಾಲೆಯಲ್ಲಿ ೩ ತರಗತಿಗಳು ಹಾಗೂ ಕಿರಿಯ ಕಾಲೇಜಿನಲ್ಲಿ ೨ ತರಗತಿಗಳಿವೆ. ಪ್ರತಿಯೊಂದು ತರಗತಿಗಳಲ್ಲಿಯೂ ಈ ಕೆಳ ಕಂಡಂತೆ ವಿಭಾಗಗಳಿವೆ

೧) ಪ್ರೌಢಶಾಲೆ ವಿಭಾಗ.

———————

೮ನೇ ತರಗತಿ. ೨೯೯—ಳ ವಿಭಾಗಗಳು
೯ನೇ ತರಗತಿ. ೨೯೦—ಳ ವಿಭಾಗಗಳು
೧೦ನೇ ತರಗತಿ. ೧೭೨—ಳ ವಿಭಾಗಗಳು.

೨) ಕಾಲೇಜು ವಿಭಾಗ.

———————

ಪ್ರಥಮ ಪಿಯುಸಿ—೧೭೦—ಸಿ ವಿಭಾಗಗಳು
ದ್ವಿತಿಯ ಪಿಯುಸಿ—೧೪೨—ಸಿ ವಿಭಾಗಗಳು.

ಆ) ೧೦೧ಸಿ (ಪೌಢಶಾಲೆ ಮತ್ತು ಕಿರಿಯ ಕಾಲೇಜು).

ಇ) ಇಲ್ಲ. (ಸ್ಥಳಾವಕಾಶವಿಲ್ಲದೆ ಬಾಡಿಗೆ ಕಟ್ಟಡ ತೆಗೆದುಕೊಳ್ಳಲಾಗಿದೆ.

ಈ) ಇಲ್ಲ.

ಉ) ೧೯೫೨ ರಲ್ಲಿ ನಿರ್ಮಿಸಲಾಗಿದೆ.

೮ನೇ ತರಗತಿ — ೪ ವಿಭಾಗಗಳು
೯ನೇ ತರಗತಿ — ೪ ವಿಭಾಗಗಳು
೧೦ನೇ ತರಗತಿ — ೪ ವಿಭಾಗಗಳು
ಪ್ರಥಮ ಪಿಯುಸಿ — ೩ ವಿಭಾಗಗಳು
ದ್ವಿತೀಯ ಪಿಯುಸಿ — ೩ ವಿಭಾಗಗಳು
ನಡೆಯುತ್ತಿವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ರಘುಪತಿ. (ಶಿಕ್ಷಣ ಸಚಿವರು) .—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ನಾನು ಈ ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಮಂಡಿಸಲಾಗಿದೆ.

ಮಂಜವಿಗಳು

ಇಂಜಿನಿಯರಿಂಗ್ ಕಾಲೇಜು ಸೀಟುಗಳ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಇಂಜಿನಿಯರಿಂಗ್ ಕಾಲೇಜಿನ ಸೀಟುಗಳ ಬಗ್ಗೆ ಹೈಕೋರ್ಟಿನಲ್ಲಿ ಸ್ಕ್ಯಾಮ್ ಆಗಿದೆ. ಸುಮಾರು ೪ ಸಾವಿರ ವಿದ್ಯಾರ್ಥಿಗಳು ಟಿಕ್ಸ್ ತೆಗೆದುಕೊಂಡಿದ್ದಾರೆ. ಅವರಲ್ಲಿ ಅರ್ಹರಿಗೆ ಸೀಟು ಕೊಡುವುದಕ್ಕೆ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಕೂಡಲೇ ನಿರ್ಧರಿಸಬೇಕು.